| Form No.4 (Civil) Deposition Sheets (R.P.No.57) |
|---|

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ**

**ಮಿಸ್. ಕೇಸ್ ನಂ. 20 ಃ 2011**

**ಚಾ. ಸಾ.** 1

| | |
|---|---|
| ಸಾಕ್ಷಿದಾರರ ಹೆಸರು | ಬಾಲಚಂದ್ರ.ಎಸ್.ಎಲ್. |
| ತಂದೆಯ ಹೆಸರು | ಲಕ್ಷ್ಮೀನಾರಾಯಣ |
| ವಯಸ್ಸು | 23 ವರ್ಷಗಳು |
| ಉದ್ಯೋಗ | ಕಿರಿಯ ಅಭಿಯಂತ , ಲೋಕೋಪಯೋಗಿ ಇಲಾಖೆ , 1ನೇ ಉಪವಿಭಾಗ , ಮಂಡ್ಯ |
| ವಾಸ | ಮಂಡ್ಯ |

**ಪ್ರಮಾಣವಚನ ಬೋಧಿಸಿದ ದಿನಾಂಕ ಃ 09.08.2011**

**ಮುಖ್ಯ ವಿಚಾರಣೆ ಃ ನ್ಯಾಯಾಲಯದಿಂದ**

1. ಈ ಪ್ರಕರಣದಲ್ಲಿ ನನ್ನನ್ನು ಕಮಿಷನರ್‌ಆಗಿ ನೇಮಕಮಾಡಲಾಗಿತ್ತು. ದಿಃ 09.03.2011 ರಂದು ನಾನು ವಿವಾದಿತ ಸ್ಥಳಕ್ಕೆ ಹೋಗಿ ಸ್ಥಳ ಪರಿಶೀಲನೆ ಮಾಡಿದ್ದೆ. ಅದಕ್ಕೂ ಮೊದಲು

ಉಭಯ ಪಕ್ಷದವರಿಗೆ ತಿಳುವಳಿಕೆ ಕೊಟ್ಟಿದ್ದೆ. ಸ್ಥಳದಲ್ಲಿ ಮಹಜರ್ ಮಾಡಿದ್ದೆ. ಅದನ್ನು ಸಿ.ನಿ.1 ಅಂತ ಗುರುತಿಸಿದೆ. ವರದಿಯನ್ನು 9 ಪುಟಗಳ ವರದಿಯನ್ನು ಸಿ.ನಿ. 2 ಅಂತ ಗುರುತಿಸಿದೆ.

ವಿಚಾರಣೆ ಮುಂದೂಡಿದೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

ಅಪರ ಜಿಲ್ಲಾ ನ್ಯಾಯಾಧೀಶರು,
ಮಂಡ್ಯ

ಸಾಕ್ಷಿಯನ್ನು ದಿಃ 4.1.2012 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದೆ

ಮುಂದುವರಿದ ಮುಖ್ಯ ವಿಚಾರಣೆ ನ್ಯಾಯಾಲಯದಿಂದ ಃ

2. ಈ ಪ್ರಕರಣದ ಅರ್ಜಿದಾರ ಸಲ್ಲಿಸಿದ ತಕರಾರುಗಳಿಗೆ ನಾನು ಉತ್ತರ ಕೊಟ್ಟಿದ್ದೇನೆ. ಅದನ್ನು ಕೊಡುವ ಮೊದಲು ನಾನು ಪುನಃ ಜಮೀನಿಗೆ ಭೇಟಿ ಕೊಟ್ಟದ್ದು ಇಲ್ಲ. ಸದರಿ ತಕರಾರನ್ನು ಸಿ. 3 ಅಂತ ಗುರ್ತಿಸಿದೆ.

ಪಾಟೀ ಸವಾಲು ಃ ಶ್ರಿ ಎಂ.ಬಿ.ಆರ್ ವಕೀಲರಿಂದಃ

2. ಕಮಿಷನ್ ವಾರೆಂಟ್ ನಮ್ಮ ಕಛೇರಿ ಎ.ಇ.ಇ. ರವರಿಗೆ ಬಂದಿತ್ತು. ಅವರು ನನಗೆ ಕಮಿಷನರ್ ಕೆಲಸವನ್ನು ಮಾಡಲು ಹೇಳಿದ್ದರು. ಅವರು ನನಗೆ ಲಿಖಿತವಾದ ಆದೇಶ ಕೊಟ್ಟಿಲ್ಲ. ನಾನು ಸಿವಿಲ್ ಕಿರಿಯ ಅಭಿಯಂತ. ಎ.ಇ.ಇ. ರವರು ಬಿ.ಇ ಸಿವಿಲ್ ಪದವೀಧರರು. ನಮ್ಮ ಕಛೇರಿಯಲ್ಲಿ ವಿದ್ಯುತ್ ಇಂಜಿನಿಯರಿಂಗ್ ಪದವೀಧರರು ಇರುವುದಿಲ್ಲ. ವಿದ್ಯುತ್ ತಂತಿಯಿಂದ ಯಾವ ರೀತಿ ಜಮೀನಿಗೆ ಹಾನಿಯಾಗುತ್ತದೆ ಅಂತ ನನಗೆ ಹೇಳಲು ಬರುವುದಿಲ್ಲ.
3. ವಿದ್ಯುತ್ ಇಲಾಖೆಯ ಬಿ.ಎನ್.ಸತೀಶ್ ಎಂಬ ಎ.ಇ.ಇ. ಮತ್ತು ರಜನಿಕಾಂತ್ ಎ.ಇ. ಇವರುಗಳು ಕೊಟ್ಟ ಮಾಹಿತಿ ಪ್ರಕಾರ ಸೂಚನಾ ಪತ್ರಗಳಿಗೆ ಉತ್ತರ ಕೊಟ್ಟಿದ್ದೆ. ಅವರುಗಳ ಬಗ್ಗೆ ನನಗೆ

ಖುದ್ದಾಗಿ ಮಾಹಿತಿ ಇಲ್ಲ. ಅವರು ಕೊಟ್ಟ ಮಾಹಿತಿಯ ಮೇರೆಗೆ ನಾನು ವರದಿಯನ್ನು ತಯಾರಿಸಿದ್ದೆ. ಜಮೀನಿನಲ್ಲಿ ಹಾನಿಗೀಡಾದ ಮತ್ತು ಹಾನಿಗೊಳಗಾಗುವ ಬೆಳೆ ಅಥವಾ ವಸ್ತು ಇರಲಿಲ್ಲ.

4. ಸ್ವಾಧೀನ ಪಡಿಸಿಕೊಂಡ ಜಮೀನು ನಿವೇಶನವಾಗಿತ್ತು. ಭೂಮಿಯಿಂದ ವಿದ್ಯುತ್ ತಂತಿ ಇರುವ ಸ್ಥಳಕ್ಕೆ 6.7 ಮೀಟರ್ ಎತ್ತರವಿತ್ತು. ಅರ್ಜಿದಾರರ ಜಮೀನಿನಲ್ಲಿ ಯಾವುದೇ ವಿದ್ಯುತ್ ಕಂಬಗಳಿರಲಿಲ್ಲ. ಅರ್ಜಿದಾರರ ಜಮೀನಿನ ಪಶ್ಚಿಮದ ಕಡೆಯಿಂದ ವಿದ್ಯುತ್ ತಂತಿ ಹಾದು ಹೋಗುತ್ತದೆ. ಆ ಜಮೀನು ಕೊಪ್ಪ ಮತ್ತು ಮದ್ದೂರು ಮುಖ್ಯ ರಸ್ತೆಯಲ್ಲಿ ಬದಿಯಲ್ಲಿ ಬರುತ್ತದೆ. ವಿದ್ಯುತ್ ಅಭಿಯಂತರಿಗೆ ಕೆಲಸ ವಹಿಸಬೇಕು ಅಂತ ನಾನು ಎ.ಇ.ಇ ರವರಿಗೆ ಹೇಳಿಲ್ಲ. ನಾನು ವಿದ್ಯುತ್ ಇಂಜಿನಿಯರ್ ಮಾತು ಕೇಳಿ ಸುಳ್ಳು ವರದಿ ಕೊಟ್ಟಿದ್ದೇನೆ ಅಂತ ಅನ್ನುವುದು ಸರಿಯಲ್ಲ .

(ನನ್ನ ಉಕ್ತಲೇಖನದ ಮೇರೆಗೆ ದಿಃ 4.1.2012 ರಂದು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

ಅಪರ ಜಿಲ್ಲಾ ನ್ಯಾಯಾಧೀಶರು,
ಮಂಡ್ಯ